**All India Radio: Bangalore**
**National Bulletin In Kannada**
**21.01.2025 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

****************

ಮುಖ್ಯಾಂಶಗಳು

೧. ನವದೆಹಲಿಯಲ್ಲಿಂದು ಪಿಎಂ ಜನ್‌ಮನ್ ಕುರಿತು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳ ಸಮ್ಮೇಳನ

೨. ಅಮೆರಿಕಾದ ೪೭ನೇ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್, ಉಪಾಧ್ಯಾಕ್ಷರಾಗಿ ಜೆ.ಡಿ.ವ್ಯಾನ್ಸ್ ಪ್ರಮಾಣವಚನ ಸ್ವೀಕಾರ

೩. ಜಮ್ಮು-ಕಾಶ್ಮೀರಾದ್ಯಂತ ಸುಗಮ ಗಣರಾಜ್ಯೋತ್ಸವ ಆಚರಣೆ ಸಕಲ ಸಿದ್ಧತೆ, ಬಿಗಿ ಭದ್ರತೆ

೪. ವಿಶ್ವಕಪ್ ಟಿ-೨೦ ಮಹಿಳಾ ಕ್ರಿಕೆಟ್; ಭಾರತ-ಮಲೇಷ್ಯಾ ಮುಖಾಮುಖಿ

****************

ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ ನವದೆಹಲಿಯಲ್ಲಿಂದು ಭಾರತ್ ಮಂಟಪದಲ್ಲಿ ಪಿಎಂ ಜನ್‌ಮನ್ ಕುರಿತು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಿದೆ.

ಬುಡಕಟ್ಟು ವ್ಯವಹಾರಗಳ ಸಚಿವ ಜುವಾಲ್ ಓರಾಮ್ ಮತ್ತು ಬುಡಕಟ್ಟು ವ್ಯವಹಾರಗಳ ರಾಜ್ಯ ಸಚಿವ ದುರ್ಗಾದಾಸ್ ಉಯಿಕೆ ಕೂಡ ಸಮ್ಮೇಳನದಲ್ಲಿ ಭಾಗವಹಿಸುತ್ತಾರೆ. ಗ್ರಾಮೀಣಾಭಿವೃದ್ಧಿ (ಆವಾಸ್ ಮತ್ತು ರಸ್ತೆಗಳು), ಹಾಸ್ಟೆಲ್‌ಗಳು (ಶಾಲೆಗಳು), ಕುಡಿಯುವ ನೀರು, ಅಂಗನವಾಡಿಗಳ ಕಾರ್ಯಾಚರಣೆ ಮತ್ತು ಬಹುಪಯೋಗಿ ಕೇಂದ್ರಗಳ ಕಾರ್ಯಾಚರಣೆ ಸೇರಿದಂತೆ ಆರು ಪ್ರಮುಖ ಕ್ಷೇತ್ರಗಳ ಮೇಲೆ ಸಮ್ಮೇಳನದಲ್ಲಿ ಗಮನ ಕೇಂದ್ರೀಕರಿಸಲಾಗುವುದು.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ದೃಷ್ಟಿಕೋನಕ್ಕೆ ಅನುಗುಣವಾಗಿ, ಉದ್ದೇಶಿತ ಯೋಜನೆಗಳು ಎಲ್ಲರಿಗೂ ತಲುಪುವುದನ್ನು ಖಚಿತಪಡಿಸಿಕೊಳ್ಳಲು, ಯೋಜನೆಯ ಉದ್ದೇಶಗಳನ್ನು ತ್ವರಿತಗೊಳಿಸಲು ಸಹಕಾರಿಯಾಗಿದೆ.

೧೮ ರಾಜ್ಯಗಳ ಒಟ್ಟು ೮೮ ಜಿಲ್ಲೆಗಳು ಚರ್ಚೆಗಳಲ್ಲಿ ಭಾಗವಹಿಸಲಿದ್ದು, ಪಿಎಂ ಜನ್‌ಮನ್ ಅನುಷ್ಠಾನಕ್ಕಾಗಿ ಕ್ರಿಯಾ ಯೋಜನೆ ರೂಪಿಸುತ್ತವೆ ಎಂದು ಬುಡಕಟ್ಟು ವ್ಯವಹಾರಗಳ ಸಚಿವಾಲಯ ತಿಳಿಸಿದೆ.

****************

ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ೪೭ನೇ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ್ದು, ಅವರು ಎರಡನೇ ಅವಧಿಗೆ ಪ್ರಮಾಣವಚನ ಸ್ವೀಕರಿಸಿದ್ದಾರೆ. ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ನಿನ್ನೆ ರಾತ್ರಿ ವಾಷಿಂಗ್ಟನ್ ಡಿಸಿಯ ಕ್ಯಾಪಿಟಲ್ ರೊಟುಂಡಾದಲ್ಲಿ ಪ್ರಮಾಣವಚನ ಬೋಧಿಸಿದರು.

ಈ ಕುರಿತು ಒಂದು ವರದಿ.

ಡೊನಾಲ್ಡ್ ಟ್ರಂಪ್ ಅವರೊಂದಿಗೆ ಜೆಡಿ ವ್ಯಾನ್ಸ್ ಉಪಾಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದರು, ನ್ಯಾಯಮೂರ್ತಿ ಬ್ರೆಟ್ ಕವನಾಗ್ ಅವರು ಪ್ರಮಾಣವಚನ ಬೋಧಿಸಿದರು.

ತಮ್ಮ ಭಾಷಣದಲ್ಲಿ, ಅಧ್ಯಕ್ಷ ಟ್ರಂಪ್ ಅವರು, ಅಗತ್ಯ ವಸ್ತುಗಳ ಬೆಲೆಗಳನ್ನು ಕಡಿಮೆ ಮಾಡಲು ರಾಷ್ಟ್ರೀಯ ಇಂಧನ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ. ಅತಿಯಾದ ವೆಚ್ಚ ಮತ್ತು ಹೆಚ್ಚುತ್ತಿರುವ ಇಂಧನ ಬೆಲೆಗಳಿಂದ ಹಣದುಬ್ಬರ ಉಂಟಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಸರಕುಗಳ ಬೆಲೆಯನ್ನು ಕಡಿಮೆ ಮಾಡಲು ತಾವು ಬದ್ಧರಾಗಿರುವುದಾಗಿ ಅವರು ತಿಳಿಸಿದ ಅವರು, ಅಮೆರಿಕದ ಸುವರ್ಣಯುಗ ಈಗ ಅವರ ನಾಯಕತ್ವದಲ್ಲಿ ಪ್ರಾರಂಭವಾಗುತ್ತದೆ ಎಂದು ಘೋಷಿಸಿದರು.

ಶುದ್ಧ ಇಂಧನ ಉಪಕ್ರಮಗಳನ್ನು ಮರಳಿ ತರುವುದು ಸೇರಿದಂತೆ ತಾವು ಕೈಗೊಳ್ಳಲು ಯೋಜಿಸಿರುವ ಹಲವಾರು ಕಾರ್ಯಕ್ರಮಗಳ ಬಗ್ಗೆ ಟ್ರಂಪ್ ಪ್ರಸ್ತಾಪಿಸಿದರು.

ಅಮೆರಿಕನ್ ಕಾರ್ಮಿಕರು ಮತ್ತು ಕುಟುಂಬಗಳನ್ನು ರಕ್ಷಿಸಲು ವ್ಯಾಪಾರ ವ್ಯವಸ್ಥೆಯನ್ನು ತಕ್ಷಣವೇ ಕೂಲಂಕಷವಾಗಿ ಪರಿಶೀಲಿಸುವುದಾಗಿ ಹೇಳಿದರು.

ಇದಲ್ಲದೆ, ನ್ಯಾಯ ಇಲಾಖೆಯ ಶಸ್ತ್ರಾಸ್ತ್ರೀಕರಣವನ್ನು ಕೊನೆಗೊಳಿಸುವುದಾಗಿ ತಿಳಿಸಿದರು.

ನ್ಯಾಯದ ಮಾಪಕಗಳನ್ನು ಮರುಸಮತೋಲನಗೊಳಿಸಲಾಗುವುದು "ನ್ಯಾಯ ಇಲಾಖೆ ಹಾಗೂ ಸರ್ಕಾರದ ಹಿಂಸಾತ್ಮಕ ಮತ್ತು ಅನ್ಯಾಯದ ಶಸ್ತ್ರಾಸ್ತ್ರೀಕರಣ ಕೊನೆಗೊಳ್ಳುತ್ತದೆ" ಎಂದು ಅವರು ಪ್ರತಿಪಾದಿಸಿದರು.

ಅಧಿಕಾರ ವಹಿಸಿಕೊಂಡ ಬಳಿಕ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಟ್ರಂಪ್ ಅವರು ಹಲವು ಘೋಷಣೆಗಳನ್ನು ಮಾಡಿದರು. 'ಇಂದಿನಿಂದ ನಮ್ಮ ದೇಶ ಮತ್ತಷ್ಟು ಬಲಿಷ್ಠವಾಗಲಿದೆಯಲ್ಲದೆ, ವಿಶ್ವದಾದ್ಯಂತ ತನ್ನ ಗೌರವವನ್ನು ಮರಳಿ ಪಡೆಯಲಿದೆ. ಪ್ರತಿ ರಾಷ್ಟ್ರವೂ ನಮ್ಮ ಕಡೆ ತಿರುಗಿ ನೋಡುವ ರೀತಿಯಲ್ಲಿ ನಾವು ಬೆಳವಣಿಗೆ ಸಾಧಿಸಲಿದ್ದೇವೆ' ಎಂದು ಹೇಳಿದರು.

'ಅಮೆರಿಕ ಯಾರಿಗೂ ಮಣಿಯದು ಅಮೆರಿಕ ಇಂದಿನಿಂದ ಸಾರ್ವಭೌಮ ಮತ್ತು ಸ್ವತಂತ್ರ ರಾಷ್ಟ್ರವಾಗಲಿದೆ. ಉತ್ತಮ ಭವಿಷ್ಯವು ನಮ್ಮದಾಗಲಿದೆ' ಎಂದು ಅವರು ಘೋಷಿಸಿದರು.

ಟ್ರಂಪ್ ಅವರು ದಕ್ಷಿಣದ ಗಡಿಯಲ್ಲಿ ತುರ್ತು ಪರಿಸ್ಥಿತಿ ಘೋಷಣೆ, ಸಾಮೂಹಿಕ ಗಡಿಪಾರು, ಮಹಿಳಾ ಕ್ರೀಡಾ ವಿಭಾಗದಲ್ಲಿ ತೃತೀಯ ಲಿಂಗಿಗಳ ಭಾಗವಹಿಸುವಿಕೆಗೆ ತಡೆ, ಇಂಧನ ಶೋಧಕ್ಕೆ ಹೇರಲಾಗಿರುವ ನಿರ್ಬಂಧ ಕೈಬಿಡುವುದು ಹಾಗೂ ಆಡಳಿತದಲ್ಲಿ ದಕ್ಷತೆ ಹೆಚ್ಚಳ ಸೇರಿದಂತೆ ಹಲವು ಕಾರ್ಯಕಾರಿ ಆದೇಶಗಳಿಗೆ ಸಹಿಹಾಕುವ ಸಾಧ್ಯತೆಯಿದೆ.

ಅಮೆರಿಕಕ್ಕೆ ಎಲ್ಲ ರೀತಿಯ ಅಕ್ರಮ ಪ್ರವೇಶವನ್ನು ನಿಲ್ಲಿಸಲಾಗುವುದು. ನಮ್ಮ ದೇಶದಲ್ಲಿರುವ ಲಕ್ಷಾಂತರ 'ಕ್ರಿಮಿನಲ್' ವಿದೇಶಿಯರನ್ನು ಅವರ ದೇಶಕ್ಕೆ ಕಳುಹಿಸುವ ಪ್ರಕ್ರಿಯೆ ಪ್ರಾರಂಭಿಸುತ್ತೇವೆ' ಎಂದು ಟ್ರಂಪ್ ಹೇಳಿದ್ದಾರೆ.

'ನಮ್ಮ ದೇಶವನ್ನು ಅಕ್ರಮಿಸಲು ನಡೆಯುತ್ತಿರುವ ಪ್ರಯತ್ನವನ್ನು ತಡೆಯಲು ದಕ್ಷಿಣದ ಗಡಿಗೆ ಸೈನ್ಯವನ್ನು ಕಳುಹಿಸುತ್ತೇನೆ' ಎಂದು ಈ ಸಂದರ್ಭದಲ್ಲಿ ಅವರು ತಿಳಿಸಿದರು.

****************

ಉಷಾ ವ್ಯಾನ್ಸ್ ಅವರ ಪತಿ ಜೆ.ಡಿ. ವ್ಯಾನ್ಸ್ ಅವರು ಯುನೈಟೆಡ್ ಸ್ಟೇಟ್ಸ್‌ನ ೫೦ ನೇ ಉಪಾಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಮೊದಲ ಭಾರತೀಯ-ಅಮೇರಿಕನ್ ಮಹಿಳೆಯಾಗಿ ಇತಿಹಾಸ ನಿರ್ಮಿಸಿದ್ದಾರೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉಷಾ ವ್ಯಾನ್ಸ್ ಅವರನ್ನು ಹೊಗಳಿದ್ದಾರೆ. ಅವರು ತಮ್ಮ ಪತಿಗಿಂತ ಬುದ್ಧಿವಂತರು ಎಂದು ಹೇಳಿದ್ದಾರೆ.

ಉಷಾ ವ್ಯಾನ್ಸ್ ಭಾರತದಿಂದ ಬಂದ ತೆಲುಗು ವಲಸಿಗರಾಗಿದ್ದು, ಏರೋಸ್ಪೇಸ್ ಎಂಜಿನಿಯರ್ ರಾಧಾಕೃಷ್ಣ "ಕ್ರಿಶ್" ಚಿಲುಕುರಿ ಮತ್ತು ಸ್ಯಾನ್ ಡಿಯಾಗೋದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪ್ರೊವೊಸ್ಟ್ ಲಕ್ಷ್ಮಿ ಚಿಲುಕುರಿ ಅವರ ಪುತ್ರಿಯಾಗಿದ್ದಾರೆ.

****************

ಕೇಂದ್ರ ವಿದೇಶಾಂಗ ಸಚಿವಾಲಯ ಮತ್ತು ಉತ್ತರ ಪ್ರದೇಶ ಸರ್ಕಾರದ ಹಿರಿಯ ಅಧಿಕಾರಿಗಳು ವಿದೇಶಿ ಪತ್ರಕರ್ತರೊಂದಿಗೆ ಸಂವಾದ ನಡೆಸಿದರು.

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ವಿವಿಧ ಅಂಶಗಳನ್ನು ಚರ್ಚಿಸಿದರು. ಅಧಿಕಾರಿಗಳು ಕುಂಭಮೇಳದ ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಮಹತ್ವದ ಬಗ್ಗೆ ಚರ್ಚೆ ನಡೆಸಿದರು. ಕಾರ್ಯಕ್ರಮ ನಿನ್ನೆ ನವದೆಹಲಿಯಲ್ಲಿ ನಡೆಯಿತು.

ಸಂವಾದದ ಸಮಯದಲ್ಲಿ, ಉತ್ತರ ಪ್ರದೇಶ ಸರ್ಕಾರದ ಪ್ರತಿನಿಧಿಗಳು, ಈ ಬಾರಿಯ ಮಹಾಕುಂಭ ಇತರ ಪ್ರಮುಖ ಜಾಗತಿಕ ಕಾರ್ಯಕ್ರಮಗಳ ಹಾಜರಾತಿಯನ್ನು ಮೀರಿಸುತ್ತದೆ ಎಂದು ಒತ್ತಿ ಹೇಳಿದರು.

ಪ್ರಸಕ್ತ ಮಹಾಕುಂಭ ಮೇಳ ಅಭೂತಪೂರ್ವ ೪೫ ಕೋಟಿ ಪ್ರೇಕ್ಷಕರಿಗೆ ಸಾಕ್ಷಿಯಾಗುವ ನಿರೀಕ್ಷೆಯಿದೆ. ಇದು ವಿಶ್ವದ ಅತಿದೊಡ್ಡ ಸಭೆಗಳಲ್ಲಿ ಒಂದಾದ ಮಹಾಕುಂಭದ ಅಭೂತಪೂರ್ವ ಪ್ರಮಾಣ ಮತ್ತು ಜಾಗತಿಕ ಮಹತ್ವವನ್ನು ಒತ್ತಿಹೇಳುತ್ತದೆ

ಸರ್ಕಾರದ ಅಂದಾಜಿನ ಪ್ರಕಾರ, ಸುಮಾರು ೧೫ ಲಕ್ಷ ವಿದೇಶಿ ಪ್ರವಾಸಿಗರು ಸೇರಿದಂತೆ ೪೫ ಕೋಟಿಗೂ ಹೆಚ್ಚು ಭಕ್ತರು ಈ ಬಾರಿ ನಡೆಯುತ್ತಿರುವ ಮಹಾಕುಂಭಕ್ಕೆ ಹಾಜರಾಗುವ ನಿರೀಕ್ಷೆಯಿದೆ. ಈ ತಿಂಗಳ ೧೩ ರಂದು ಪ್ರಯಾಗ್‌ರಾಜ್‌ನಲ್ಲಿ ಪ್ರಾರಂಭವಾದ ಮಹಾಕುಂಭ ಮುಂದಿನ ತಿಂಗಳ ೨೬ ರವರೆಗೆ ಮುಂದುವರಿಯುತ್ತದೆ.

****************

ಜಮ್ಮು ಮತ್ತು ಕಾಶ್ಮೀರದಾದ್ಯಂತ ಜನವರಿ ೨೬ ರಂದು ಗಣರಾಜ್ಯೋತ್ಸವ ಆಚರಣೆಯನ್ನು ಸುಗಮವಾಗಿ ನಡೆಸಲು ಹೆಚ್ಚಿನ ಭದ್ರತೆ ಒದಗಿಸಲಾಗಿದೆ.

ಜಮ್ಮುವಿನ ಮೌಲಾನಾ ಆಜಾದ್ ಕ್ರೀಡಾಂಗಣದಲ್ಲಿ ಜನವರಿ ೨೬ ರಂದು ಮುಖ್ಯ ಕಾರ್ಯಕ್ರಮ ನಡೆಯಲಿದ್ದು, ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಸಮಾರಂಭದ ಅಧ್ಯಕ್ಷತೆ ವಹಿಸಿ ಗೌರವ ವಂದನೆ ಸ್ವೀಕರಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ವಿಶೇಷವಾಗಿ ಅಂತರರಾಷ್ಟ್ರೀಯ ಗಡಿ ಮತ್ತು ನಿಯಂತ್ರಣ ರೇಖೆಯ ಉದ್ದಕ್ಕೂ ಪೊಲೀಸ್ ಮತ್ತು ಅರೆಸೈನಿಕ ಪಡೆಗಳನ್ನು ನಿಯೋಜಿಸಲಾಗುತ್ತಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ಸೂಕ್ಷ್ಮ ಗಡಿ ಪ್ರದೇಶಗಳಲ್ಲಿ ಭದ್ರತಾ ವ್ಯವಸ್ಥೆಗಳನ್ನು ವೈಯಕ್ತಿಕವಾಗಿ ಪರಿಶೀಲಿಸಿದ್ದಾರೆ. ವಿವಿಧ ಜಿಲ್ಲೆಗಳಲ್ಲಿ ಭದ್ರತಾ ಪಡೆಗಳು ಶೋಧ ಕಾರ್ಯ ಮತ್ತು ವಾಹನ ತಪಾಸಣೆಗಳನ್ನು ತೀವ್ರಗೊಳಿಸಿವೆ.

ಕಾರ್ಯಕ್ರಮ ನಡೆಯುವ ಸ್ಥಳ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮೇಲ್ವಿಚಾರಣೆ ಮಾಡಲು ಡ್ರೋನ್‌ಗಳು ಮತ್ತು ಹೈ-ರೆಸಲ್ಯೂಷನ್ ಸಿಸಿಟಿವಿ ಕ್ಯಾಮೆರಾಗಳು ಸೇರಿದಂತೆ ಸುಧಾರಿತ ಕಣ್ಗಾವಲು ತಂತ್ರಜ್ಞಾನಗಳನ್ನು ನಿಯೋಜಿಸಲು ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

****************

ದೆಹಲಿ ವಿಧಾನಸಭಾ ಚುನಾವಣೆಗೆ ಉಮೇದುವಾರಿಕೆ ಹಿಂತೆಗೆದುಕೊಂಡ ನಂತರ ಒಟ್ಟು ೬೯೯ ಅಭ್ಯರ್ಥಿಗಳು ೭೦ ಸ್ಥಾನಗಳಿಗೆ ಕಣದಲ್ಲಿ ಉಳಿದಿದ್ದಾರೆ.

ನಿನ್ನೆ ನಾಮಪತ್ರ ಹಿಂಪಡೆಯಲು ಕೊನೆಯ ದಿನಾಂಕವಾಗಿತ್ತು. ನವದೆಹಲಿ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚು ೨೩ ಅಭ್ಯರ್ಥಿಗಳು, ಪಟೇಲ್ ನಗರ ಮತ್ತು ಕಸ್ತೂರ್ಬಾ ನಗರ ಕ್ಷೇತ್ರಗಳಲ್ಲಿ ಕನಿಷ್ಠ ಐದು ಅಭ್ಯರ್ಥಿಗಳು. ಮುಖ್ಯ ಚುನಾವಣಾ ಅಧಿಕಾರಿಯ ಪ್ರಕಾರ, ಒಂದು ಸಾವಿರದ ೫೨೨ ನಾಮಪತ್ರಗಳಲ್ಲಿ ಒಟ್ಟು ೪೮೭ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ.

ದೆಹಲಿ ವಿಧಾನಸಭಾ ಚುನಾವಣೆಗೆ ಮತದಾನ ಮುಂದಿನ ತಿಂಗಳು ೫ ರಂದು ನಡೆಯಲಿದ್ದು, ಫೆಬ್ರವರಿ ೮ ರಂದು ಎಣಿಕೆ ನಡೆಯಲಿದೆ.

****************

ನೈಜೀರಿಯಾದಲ್ಲಿ, ಕಳೆದ ವಾರ ಸಂಭವಿಸಿದ ಇಂಧನ ಟ್ಯಾಂಕರ್ ಸ್ಫೋಟದಲ್ಲಿ ನಿನ್ನೆ ಹೆಚ್ಚಿನ ಶವಗಳು ಪತ್ತೆಯಾಗಿದ್ದು ಸಾವನ್ನಪ್ಪಿದವರ ಸಂಖ್ಯೆ ೯೮ಕ್ಕೆ ಏರಿದೆ.

ಕನಿಷ್ಠ ೭೯ ಜನರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪ್ರಾದೇಶಿಕ ತುರ್ತು ಸಂಸ್ಥೆಯ ಮುಖ್ಯಸ್ಥರು ತಿಳಿಸಿದ್ದಾರೆ.

ಉತ್ತರ ನೈಜರ್ ರಾಜ್ಯದ ಡಿಕ್ಕೊದಲ್ಲಿ ಕಳೆದ ಶನಿವಾರ ಈ ಘಟನೆ ಸಂಭವಿಸಿದ್ದು, ಪೆಟ್ರೋಲ್ ಟ್ಯಾಂಕರ್ ಪಲ್ಟಿಯಾಗಿ ಸ್ಫೋಟ ಸಂಭವಿಸಿದೆ. ಈ ಸಂದರ್ಭದಲ್ಲಿ ಅವಶೇಷಗಳಿಂದ ಇಂಧನವನ್ನು ಸಂಗ್ರಹಿಸಲು ಸೇರಿದ್ದ ಜನರು ಸ್ಫೋಟದಲ್ಲಿ ಸಾವನ್ನಪ್ಪಿದ್ದಾರೆ.

****************

ಹತ್ತೊಂಬತ್ತು ವಯಸ್ಸಿನೊಳಗಿನ ಐಸಿಸಿ ವಿಶ್ವಕಪ್‌ನ ಮಹಿಳಾ ಟಿ-೨೦ ಕ್ರಿಕೆಟ್ ಟೂರ್ನಿಯ ಎರಡನೇ ಆವೃತ್ತಿಯಲ್ಲಿ, ಕೌಲಾಲಂಪುರದ ಬಯುಮಾಸ್ ಓವಲ್ ಕ್ರೀಡಾಂಗಣದಲ್ಲಿ ನಡೆಯಲಿರುವ. ಎ- ಗುಂಪಿನ ಪಂದ್ಯದಲ್ಲಿ, ಹಾಲಿ ಚಾಂಪಿಯನ್ ಭಾರತ ತಂಡ ಇಂದು, ಮಲೇಷ್ಯಾ ತಂಡವನ್ನು ಎದುರಿಸಲಿದೆ. ಪಂದ್ಯ ಮಧ್ಯಾಹ್ನ ಆರಂಭವಾಗಲಿದೆ.

ಎ- ಗುಂಪಿನ ಮತ್ತೊಂದು ಪಂದ್ಯದಲ್ಲಿ, ವೆಸ್ಟ್ ಇಂಡೀಸ್ ತಂಡ, ಶ್ರೀಲಂಕಾ ತಂಡವನ್ನು ಅದೇ ಮೈದಾನದಲ್ಲಿ ಎದುರಿಸಲಿದ್ದು, ಪಂದ್ಯ ಭಾರತೀಯ ಕಾಲಮಾನ ಬೆಳಿಗ್ಗೆ ೮ ಗಂಟೆಗೆ ಆರಂಭವಾಗಲಿದೆ.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ, ವೆಸ್ಟ್ ಇಂಡೀಸ್ ವಿರುದ್ಧ ೯ ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ವೆಸ್ಟ್ ಇಂಡೀಸ್ ತಂಡವನ್ನು ಕೇವಲ ೪೪ ರನ್‌ಗಳಿಗೆ ಆಲೌಟ್ ಮಾಡಿದ ಭಾರತದ ವನಿತೆಯರ ತಂಡ, ಕೇವಲ ೪.೨ ಓವರ್‌ಗಳಲ್ಲಿ ಗೆಲುವಿನ ಗುರಿ ಮುಟ್ಟಿತು.

ಪ್ರಸ್ತುತ ಭಾರತ ಎರಡು ಅಂಕಗಳೊಂದಿಗೆ ಎ- ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ.

****************

ಆಸ್ಟ್ರೇಲಿಯನ್ ಓಪನ್ ಟೆನಿಸ್ ಪಂದ್ಯಾವಳಿಯ ಮಿಶ್ರ ಡಬಲ್ಸ್ ಕ್ವಾರ್ಟರ್ ಫೈನಲ್ ಸ್ಪರ್ಧೆಯಲ್ಲಿಂದು ಮೆಲ್ಬೋರ್ನ್‌ನ ಶೋ ಕೋರ್ಟ್ ಅರೆನಾದಲ್ಲಿ, ಇಂಡೋ-ಚೀನಾ ಜೋಡಿ, ರೋಹನ್ ಬೋಪಣ್ಣ ಮತ್ತು ಜಾಂಗ್ ಶುವಾಯ್, ಆಸ್ಟ್ರೇಲಿಯಾ ಜೋಡಿ ಜಾನ್ ಪೀರ್ಸ್ ಮತ್ತು ಒಲಿವಿಯಾ ಗಾಡೆಕ್ಕಿ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿಂದು, ಹಾಲಿ ಒಲಿಂಪಿಕ್ ಚಾಂಪಿಯನ್ ಸೆರ್ಬಿಯಾದ ನೊವಾಕ್ ಜೊಕೊವಿಕ್, ನಾಲ್ಕು ಬಾರಿ ಗ್ರ್ಯಾಂಡ್ ಸ್ಲ್ಯಾಮ್ ವಿಜೇತ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರನ್ನು ಮುಖಾಮುಖಿಯಾಗಲಿದ್ದಾರೆ.

********ಮುಕ್ತಾಯ*******